ಕರ್ನಾಟಕ ಸರ್ಕಾರ

# ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಹಾಸನ, ಹಾಸನ ಜಿಲ್ಲೆ.

E-mail Id : ddpi.edu.kar.hsn Pin Code : 573201

ಕ್ರೀ.ವಿ.1.ರೆಡ್ ಕ್ರಾಸ್.01/2025-26 ದಿನಾಂಕ:17/12/2025

## -:ಜ್ಞಾಪನ:-

ವಿಷಯ:- ಕಿರಿಯ ರೆಡ್ ಕ್ರಾಸ್ ಘಟಕದ "ಕಿರಿಯ ರೆಡ್ ಕ್ರಾಸ್" ರಾಜ್ಯ/ರಾಷ್ಟ್ರೀಯ ಪಠ್ಯಪರೀಕ್ಷೆಗೆ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಕುರಿತು,

ಉಲ್ಲೇಖ:- ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಹಾಸನ ಶಾಖೆ ರವರ ಪತ್ರ ಸಂಖ್ಯೆ :I.R.C.S/ ಕಾ/ಸಾ/12/ಹಾ/202526 ದಿನಾಂಕ :08/12/2025

///**///**///

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶನದಂತೆ 2025-26 ನೇ ಸಾಲಿನ ಕಿರಿಯ ರೆಡ್ ಕ್ರಾಸ್ (JRC) ಘಟಕದ ವಿದ್ಯಾರ್ಥಿಗಳಿಗೆ "ಕಿರಿಯ ರೆಡ್ ಕ್ರಾಸ್" ಪಠ್ಯಪರೀಕ್ಷೆಯನ್ನು ದಿನಾಂಕ 03-01-2026ರ ಶನಿವಾರ ಬೆಳಗ್ಗೆ 10.30 ರಿಂದ 11.30 ರ ವರೆಗೆ ಶಾಲೆಗಳಲ್ಲಿ ಆಯೋಜಿಸಲಾಗಿದ್ದು ಪ್ರೌಢಶಾಲೆಯ 8ನೇ, 9ನೇ ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಅರ್ಹರಾಗಿರುತ್ತಾರೆ. ಪ್ರಸ್ತುತ ವರ್ಷ ಕರ್ನಾಟಕ ರಾಜ್ಯ ಶಾಖೆಯಿಂದ ಓ.ಎಂ.ಆರ್ ಮಾದರಿ ಪರೀಕ್ಷೆಯನ್ನು ನಡೆಸಲು ತೀರ್ಮಾನಿಸಿಲಾಗಿದ್ದು 2025-26ನೇ ಸಾಲಿನಲ್ಲಿ ಕಿರಿಯ ರೆಡ್ ಕ್ರಾಸ್ ಪರೀಕ್ಷೆಗೆ ಅತಿಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ ಜಿಲ್ಲೆಗೆ ಪ್ರಥಮ ಬಹುಮಾನವನ್ನು ರಾಜ್ಯ ಶಾಖೆಯ ವತಿಯಿಂದ ನೀಡುವುದರಿಂದ ಸದರಿ ಪರೀಕ್ಷೆಗೆ ಹೆಚ್ಚಿನ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಲು ಉಲ್ಲೇಖದ ಪತ್ರದಲ್ಲಿ ಕೋರಿರುತ್ತಾರೆ.

ಅದರಂತೆ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲಾ ಮುಖ್ಯ ಶಿಕ್ಷಕರಿಗೆ "ಕಿರಿಯ ರೆಡ್ ಕ್ರಾಸ್" ಪಠ್ಯ ಪರೀಕ್ಷೆಯ ಬಗ್ಗೆ ಮಾಹಿತಿ ನೀಡಿ ಶೈಕ್ಷಣಿಕವಾಗಿ ಯಾವುದೇ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿಕೊಂಡು ಆಸಕ್ತ ವಿದ್ಯಾರ್ಥಿಗಳು ಸದರಿ "ಕಿರಿಯ ರೆಡ್ ಕ್ರಾಸ್" ಪಠ್ಯ ಪರೀಕ್ಷೆಯಲ್ಲಿ ಭಾಗವಹಿಸಲು ಕ್ರಮವಹಿಸುವಂತೆ ಈ ಮೂಲಕ ಸೂಚಿಸಿದೆ

ಉಪನಿರ್ದೇಶಕರು(ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ಹಾಸನ ಜಿಲ್ಲೆ

ಗೆ,

ಆಲೂರು, ಅರಕಲಗೂಡು, ಅರಸೀಕೆರೆ, ಬೇಲೂರು, ಚನ್ನರಾಯಪಟ್ಟಣ, ಹಾಸನ, ಹೊಳೆನರಸೀಪುರ, ಮತ್ತು ಸಕಲೇಶಪುರ.ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು,

1. ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ ಹಾಸನ ರವರಿಗೆ ಮಾಹಿತಿಗಾಗಿ
2. ಕಛೇರಿ ಪ್ರತಿ.

INDIAN RED CROSS SOCIETY
KARNATAKA STATE BRANCH
Date 458
19/12/25